ಕರೆಯುತ್ತಿದ್ದರೋ?'

'ಅವರಿಗೆ ಅತ್ಯಂತ ಪ್ರೀತಿಯಾದಾಗ ಮ್ಯಾಗ್ಸೆ ಎಂದು ಕರೆಯುತ್ತಿದ್ದರು. ಇದು ಹೇಗೆ ನಿಮಗೆ ಗೊತ್ತಾಯಿತು.'

'ಹೌದು ಹೌದು, ನಾವು ಭಾರತೀಯರೆಂದು ನಿನಗೆ ಗೊತ್ತು ತಾನೆ? ನಾವು ಅಧ್ಯಾತ್ಮವಾದಿಗಳು' ಎಂದೆ. 'ಹಾಗೆಂದು ನಾನು ಕೇಳಿದ್ದೆ' ಎಂದು ಹೇಳಿದಳು. 'ನಿಜವಾಗಲೂ' ನನಗೆ ಆಶ್ಚರ್ಯವಾಯಿತು. 'ಏನು ನೀನು ಕೇಳಿದ್ದೆ?'

'ಭಾರತದಲ್ಲಿ ಅನೇಕ ಜನರು ಅತೀಂದ್ರಿಯ ಶಕ್ತಿ ಹೊಂದಿರುತ್ತಾರೆ ಎಂದು ಕೇಳಿದ್ದೇನೆ. ಅಂಥವರಿಗೆ ಯೋಗಿಗಳೆಂದು ಕರೆಯುತ್ತಾರೆ. ಆದರೆ ನೀವೇನೂ ಯೋಗಿ ಅಲ್ಲ.'

'ನಾನು ಯೋಗಿ ಅಲ್ಲ ಎಂದು ನಿನಗೆ ಹೇಗೆ ಗೊತ್ತಾಯಿತು ಮ್ಯಾಗಿ?'

'ಯೋಗಿಗಳು ಮಾಂಸಾಹಾರವನ್ನು ತಿನ್ನುವುದಿಲ್ಲ. ಅದಕ್ಕಾಗಿಯೇ ಪ್ರಾರಂಭದಲ್ಲಿ ನೀನು ನನ್ನನ್ನು ಕೇಳಿದ್ದು, ನಾನು ಸಸ್ಯಾಹಾರಿ ಹೌದೋ ಅಲ್ಲ ಎಂದು.' ಅವಳು ಯಾವುದೇ ಪ್ರತ್ಯುತ್ತರ ಕೊಡದೇ ಮುಗಳ್ನಕ್ಕಳು.

ಒಂದು ಇಕ್ಕಟ್ಟಾದ ಬಾಗಿಲು ಮಾರ್ಗವನ್ನು ನಾವು ತಲುಪಿದೆವು. ಮ್ಯಾಗಿ ತನ್ನ ಪರ್ಸ್‌ನಿಂದ ಒಂದು ಸಣ್ಣ ತೆಳುವಾದ ಕೀ ತೆಗೆದು ಬಾಗಿಲನ್ನು ತೆರೆದಳು. ಅವಳು ಒಳಗೆ ಹೋಗಿ 'ದಯವಿಟ್ಟು ಬನ್ನಿ' ಎಂದಳು. ನಾನು ಒಳಗೆ ಬಂದ ಕೂಡಲೇ ಮ್ಯಾಗಿ ಬಾಗಿಲನ್ನು ಮುಚ್ಚಿದಳು. ಮೆಟ್ಟಿಲುಗಳ ಬಳಿಗೆ ಹೋಗಿ ಸ್ವಲ್ಪ ಗಟ್ಟಿ ಧ್ವನಿಯಲ್ಲಿ 'ಅಮ್ಮಾ ಎಲ್ಲಿದ್ದಿಯಾ' ಎಂದು ಕರೆದಳು.

'ನಾನು ಅಡುಗೆ ಮನೆಯಲ್ಲಿದ್ದೇನೆ ಕಂದಾ ಕೆಳಗೆ ಬಾ' ಎಂದು ಉತ್ತರ ಬಂತು.

ಲಂಡನ್ನಿನ ಬೀದಿಗಳು ತಳಮಟ್ಟಕ್ಕಿಂತ ಮೇಲಿವೆ ಎಂಬ ಅಗತ್ಯ ವಿವರವನ್ನು ಇಲ್ಲಿ ಹೇಳಬೇಕಿದೆ. ಅದರಲ್ಲೂ ಅಡುಗೆ ಮನೆಗಳು ಬೀದಿಯ ಮಟ್ಟಕ್ಕಿಂತ ಕೆಳಗಡೆ ಇರುತ್ತವೆ.

ಮ್ಯಾಗಿ ನನ್ನ ಕಡೆ ಪ್ರಶ್ನಾರ್ಥಕವಾಗಿ ನೋಡುತ್ತಾ 'ಏನಾದರೂ ತಿಳಿದುಕೊಂಡಿರಾ?'

'ಎಂಥದೂ ಇಲ್ಲ ಬಾ' ಎಂದು ನಾನು ಹೇಳಿದೆ. ನಾವಿಬ್ಬರೂ ಜೊತೆ ಜೊತೆಗೆ ಮೆಟ್ಟಿಲುಗಳನ್ನು ಇಳಿಯುತ್ತಾ ಅಡುಗೆ ಕೋಣೆಗೆ ಬಂದೆವು.

'ಅಮ್ಮಾ' ಎಂದು ಮ್ಯಾಗಿ ಬಾಗಿಲಲ್ಲಿ ಕೂಗುತ್ತಾ 'ಓರ್ವ ಭಾರತೀಯರು ನಿನ್ನನ್ನು ನೋಡಲು ಬಂದಿದ್ದಾರೆ' ಎಂದಳು.

'ಎಲ್ಲಿದ್ದಾರೆ' ಎಂದು ವಯಸ್ಸಾದ ಹೆಣ್ಣು ಮಗಳು ಕುತೂಹಲದಿಂದ ಕೇಳಿದಳು. ನಾನು ಮ್ಯಾಗಿಯನ್ನು ಹಿಂಬಾಲಿಸುತ್ತಾ, ಮಂದಹಾಸ ಬೀರುತ್ತಾ ಅಡುಗೆ ಕೋಣೆಗೆ ಹೋದೆ. ಅವಳು ನನ್ನನ್ನು ಪರಿಚಯಿಸಿದಳು.

'ಇವರು ಮಿ. ಗುಪ್ತಾ ಅಂತಾ ಅಮ್ಮಾ.'

'ಸಾರ್, ಇವರು ನನ್ನ ತಾಯಿ.'

'ಹೇಗಿದ್ದೀರಾ' ಎಂದು ನಾನು ಹೇಳುತ್ತಾ ಕೈಕುಲುಕಲು ಮುಂದೆ ಚಾಚಿದೆ.

'ದಯವಿಟ್ಟು ಕ್ಷಮಿಸಿ ನನ್ನ ಕೈಗಳು' ಎಂದು ಹೇಳುತ್ತಾ ನನಗೆ ತೋರಿಸಿದರು. ಅವುಗಳಿಗೆ ಹಿಟ್ಟು ಮೆತ್ತಿತ್ತು. 'ಈ ದಿನ ಶನಿವಾರ ನಾನು ಕೇಕನ್ನು ಮಾಡುತ್ತಿದ್ದೆ' ಎಂದು ವಿವರಿಸಿದರು. 'ಜನರು ಈ ಸಾಯಂಕಾಲ ಅವನ್ನು ಕೊಳ್ಳಲು ಬರುತ್ತಾರೆ. ಅವು ರಾತ್ರಿ ಹೊತ್ತು ಬೀದಿಯಲ್ಲಿ ಮಾರಾಟವಾಗುತ್ತವೆ. ನಮ್ಮ ಜೀವನವನ್ನು ಈ ರೀತಿ ಸಾಗಿಸುತ್ತೇವೆ.'

ಶನಿವಾರ ರಾತ್ರಿ ಅಕ್ಕಪಕ್ಕದ ಬಡ ಜನರಿಗೆ ಹಬ್ಬದಂತೆ. ಎಣಿಸಲಾಗದ ಎಲ್ಲಾ ತರಹದ